**ದಿನಾಂಕ:24.09.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲುಃ</u> ವಾದಿ ಪರ ವಕೀಲರು ಶ್ರೀಮತಿ. ಎಸ್ ಎಸ್ ಎಸ್ ರವರಿಂದಃ**

(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಮರಾಠಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಉಪಸ್ಥಿತಿ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು. ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)

1. ಪರೀಟ ಗಲ್ಲಿ, ಅನಗೋಳ, ಬೆಳಗಾವಿ ಯಲ್ಲಿರುವ ಮನೆ ಸಂಖ್ಯೆ 218 ರ ಮಾಲೀಕ ನಾನು ಎಂದರೆ ಸರಿ. ವಾದಿ ಪರೀಟ ಗಲ್ಲಿ ಅನಗೋಳ, ಬೆಳಗಾವಿ ಯಲ್ಲಿರುವ ಮನೆ ಸಂಖ್ಯೆ 219 ರಲ್ಲಿರುವ ಮಾಲೀಕ ಎಂದರೆ ಸರಿ. ವಾದಿಯ ಮನೆ ನಮ್ಮ ಮನೆಯ ಉತ್ತರಕ್ಕೆ ಬರುತ್ತದೆ ಎಂದರೆ ಸರಿ. ನಮ್ಮ ಮನೆಯ ಪೂರ್ವ ಪಶ್ಚಿಮಕ್ಕೆ ಯಾರು ಬರುತ್ತಾರೆ ಎಂದರೆ ಸಾಕ್ಷಿ ಪೂರ್ವಕ್ಕೆ ರಸ್ತೆ ಇದೆ, ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ಕಾಶೀನಾಥ ಪವಾರ ರವರ ಮನೆ ಇದೆ. ವಾದಿಯವರ ಮನೆಯ ದಕ್ಷಿಣಕ್ಕೆ ಗೋಡೆ ಇದೆ ಅದು ವಾದಿಯರಿಗೆ ಸೇರಿದ್ದು ಎಂದರೆ ಸಾಕ್ಷಿ ನಮ್ಮ ಮನೆಯ ಗೋಡೆ ಬೇರೆ ಇದೆ ವಾದಿಯರ ಮನೆ ಗೋಡೆ ಬೇರೆ ಇದೆ ಎನ್ನುತ್ತಾರೆ. ಅದೇ ಪ್ರಕಾರ ವಾದಿಯ ಮನೆಯ ದಕ್ಷಿಣಕ್ಕೆ ಬಾವಿ ಇದೆ ಎಂದರೆ ಸಾಕ್ಷಿ ನಮ್ಮ ಮತ್ತು ವಾದಿಯರ ಸ್ವತ್ತಿನ ಮಧ್ಯದಲ್ಲಿ ಬಾವಿ ಇದೆ ಎನ್ನುತ್ತಾರೆ. ನಿಮ್ಮ ಸ್ವತ್ತಿನಲ್ಲಿ ನಿಮ್ಮ ಸ್ವಂತ ಗೋಡೆ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಸಿಟಿ ಸರ್ವೆ ದಾಖಲೆ ಮತ್ತು ನಕ್ಷೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸದರಿ ಬಾವಿಯನ್ನು ನಾವು ಮತ್ತು ವಾದಿಯರು ಉಪಯೋಗಿಸುತ್ತಿದ್ದೆವು ಎಂದು ತೋರಿಸಲು ದಾಖಲೆಗಳನ್ನು

ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ ಅಸಲು ದಾವೆ ಸಂಖ್ಯೆ: 30/2002 ನ್ನು ಯಾವ ಕಾರಣಕ್ಕಾಗಿ ಹೂಡಿದ್ದರು ಎಂದರೆ ಸಾಕ್ಷಿ ವಾದಿಯರು ನಮ್ಮ ಮನೆಯ ಹಿಂದಿನ ಭಾಗವನ್ನು ಅತಿಕ್ರಮಣ ಮಾಡಿದ್ದರು ಎಂದು ಹೂಡಿದ್ದರು ಎನ್ನುತ್ತಾರೆ. ಸದರಿ ದಾವೆ ಏನು ಆಗಿತ್ತು ಎಂದರೆ ಸಾಕ್ಷಿ ಆ ದಾವೆ ವಜಾ ಆಗಿದೆ ಎನ್ನುತ್ತಾರೆ. ನಾನು ಅಸಲು ದಾವೆ ಸಂಖ್ಯೆ 1449/2010ನ್ನು ವಾದಿಯರ ವಿರುದ್ಧ ವಾದಿಯರು ನಮ್ಮ ಮನೆಯ ಹಿಂದಿನ ಭಾಗವನ್ನು ಅತಿಕ್ರಮಣ ಮಾಡಿದ್ದರು ಎಂದು ಹೂಡಿದ್ದೆನು ಎಂದರೆ ಸರಿ. ಆ ದಾವೆಯೂ ಸಹ ವಜಾ ಆಗಿದೆ ಎನ್ನುತ್ತಾರೆ. ಅಸಲು ದಾವೆ ಸಂಖ್ಯೆ 1449/2010 ವಜಾ ಆದ ನಂತರ ಸದರಿ ಡಿಕ್ರಿಯ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನೆನೆಪಿಲ್ಲ ಎನ್ನುತ್ತಾರೆ. ಅಸಲು ದಾವೆ ಸಂಖ್ಯೆ 1449/2010 ವಜಾ ಆದ ನಂತರ ನೀವು RA No.116/2017 ರಂತೆ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿ ಮಾನ್ಯ 8ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾವಣೆ ಆಗಿ RA. No.190/2019 ಎಂದು ಆಯಿತು ಎಂದರೆ ಸರಿ. ಸದರಿ ಮೇಲ್ಮನವಿಯೂ ಸಹ ವಜಾ ಆಗಿದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆದ ನಂತರ ನೀವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ RA No.190/2019 ಚಾಲ್ತಿಯಲ್ಲಿರುವಾಗ ನಾನು ವಾದಿಗೆ ತೊಂದರೆ ನೀಡಿದ್ದೆನೆ ಎಂದರೆ ಸರಿಯಲ್ಲ

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ ಸರಿಯಿದೆ.

**4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಧೀಶರು, ಬೆಳಗಾವಿ.**